## ಮುಖವಾಡದ ಬದುಕು ಎತಕೆ?

ಕಲರ್ಸ್ ಕನ್ನಡದ 'ಬಿಗ್ ಬಾಸ್' ಮನೆಯಲ್ಲಿ ಸುದೀಪ್ ಕೊಟ್ಟ ಒಂದು ಚಿಕ್ಕ ಆಟದಲ್ಲಿ, ಶಂಕರ್ ಅಶ್ವತ್ಥ್ ಸತ್ಯವನ್ನೇ ಹೇಳಿದರು. 'ಇಲ್ಲಿರುವವರೆಲ್ಲರೂ ಫೇಕ್ (fake) ಎಲ್ಲರೂ ಒಂದು ರೀತಿಯ ಮುಖವಾಡ ಹಾಕಿಕೊಂಡೇ ಇರುತ್ತಾರೆ.' ಈ ರಿಯಾಲಿಟಿ ಶೋ ಸ್ಪರ್ಧಿಗಳು ತಮ್ಮದಲ್ಲದ, ತೋರಿಕೆಯ ವ್ಯಕ್ತಿತ್ವವನ್ನು ಬಿಂಬಿಸುತ್ತಾರೆ. ಪ್ರಸಿದ್ಧಿಯ ಹಪಹಪಿತನಕ್ಕೋ, ಬಹುಮಾನದ ಜಿದ್ದಿಗೋ ಬಿದ್ದು, ತಮ್ಮ ಸಹಜ ಭಾವನೆಗಳನ್ನು ಮುಚ್ಚಿಟ್ಟು, ಕೃತಕ ಭಾವನೆಗಳನ್ನು ಹೊರ ಚೆಲ್ಲುತ್ತಾರೆ. ಅಷ್ಟೊಂದು ದಿನ ತನ್ನದಲ್ಲದ ಮನಸನ್ನು, ವ್ಯಕ್ತಿತ್ವವನ್ನು ಹೊತ್ತುಕೊಳ್ಳುವ ಒತ್ತಡ ನಿಜಕ್ಕೂ ಆಶ್ಚರ್ಯ ಹಾಗೂ ವಿಚಿತ್ರ.

—ಮಂಜುನಾಥ್ ಜಿ. ಹಗರಿಬೊಮ್ಮನಹಳ್ಳಿ

## ಅಪಭ್ರಂಶ ಉಚ್ಚಾರಣೆ

ನಾವು ಚಿಕ್ಕವರಿದ್ದಾಗ ನಮಗಿಂತ ಹಿರಿಯರನ್ನು ಅಣ್ಣ, ಶ್ರೀಯುತರೇ, ಮಹನೀಯರೇ ಎಂದೋ ಇಲ್ಲವೆ, ರೀ ಸೇರಿಸಿಯಾದರೂ ಮಾತನಾಡಿಸುತ್ತಿದ್ದೆವು. ಮನೆಯಲ್ಲಿ ಸಂಬಂಧಗಳ ಮಹತ್ವವನ್ನು ಅರ್ಥೈಸಿ ಹೇಳಿ ಕೊಡುತ್ತಿದ್ದರು. ಹಾಗಾಗಿ ನಾವು ಅಣ್ಣ ಅತ್ತಿಗೆ, ಅಕ್ಕ, ತಂಗಿ, ಅಮ್ಮ, ಅಪ್ಪ, ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವ, ದೊಡ್ಡಪ್ಪ, ದೊಡ್ಡಮ್ಮ, ಅಜ್ಜ, ಅಜ್ಜಿ ಎಂದು ಹೇಳುತ್ತಿದ್ದೆವು. ಈಗ ಸಂಬಂಧಗಳನ್ನು ಹೇಳಿ ಕೊಡಲು ಪೋಷಕರಿಗೂ ಆಸಕ್ತಿಯಿಲ್ಲ, ಮಕ್ಕಳಿಗಂತೂ ಮೊದಲೇ ಇಲ್ಲ, ತಮಗಿಂತ ದೊಡ್ಡವರೆಲ್ಲ ಅಂಕಲ್, ಆಂಟಿ!

ಈ ನಿಟ್ಟಿನಲ್ಲಿ ನಮ್ಮ ಟೀವಿಗಳು ಅಪಾರ ಕೊಡುಗೆ ನೀಡಿವೆ! ಇಲ್ಲಿ ನೋಡಿ, ಗೆಳೆಯರು ಪರಸ್ಪರ ಸಂಬೋಧಿಸುವ ಪರಿ. ಮಾಮೂ, ಮಗಾ, ಅಣ್ತಮ್ಮಾ, ಮಚ್ಚಾ, ಗುರೂ, ವಜ್ಜಾ, ತುಕಾಲಿ ಹೀಗೇ ಅನೇಕ. ಸಂಬಂಧ ವಾಚಕಗಳಂತೂ ಅಮೋಘ. ಬ್ರೋ (ಸಹೋದರ), ಮಾಮ್ (ಅಮ್ಮ), ಮಾಮ್ ಇನ್ ಲಾ (ಅತ್ತೆ), ಸಿಸ್ (ಸಹೋದರಿ), ಸಿಸ್ ಇನ್ ಲಾ (ಅತ್ತಿಗೆ), ಬ್ರೋ ಇನ್‌ಲಾ (ಭಾವ) ಇವುಗಳ ಮೂಲ ಬೇಕಾದರೆ ಝಿ ಕನ್ನಡದ 'ಜೊತೆ ಜೊತೆಯಲಿ' ಸೇರಿ ಕೆಲವು ಧಾರಾವಾಹಿಗಳನ್ನು ಸಂಪರ್ಕಿಸಬಹುದು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಪ್ರತಿ ಕಂತೂ ಒಂದು ಸಿನಿಮಾ

ಕಲರ್ಸ್ ಸೂಪರ್‌ನಲ್ಲಿ 'ಮುದ್ದು ಬಂಗಾರ' ಪ್ರಸಾರವಾಗುತ್ತಿದೆ. ಗೋಸುಂಬೆ ರೀತಿ ಬಣ್ಣ ಬದಲಾಯಿಸುವ ತಪಸ್ಯ, ತ್ಯಾಗಮಯಿ ಇಚ್ಛಾ, ಗಂಭೀರ ಪಾತ್ರದಲ್ಲಿ ಯಶಸ್ಸು ಪಡೆಯುತ್ತಿರುವ ಜೋಗಿ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಆಗದ ಸುಮತಿ, ಅದ್ಭುತ ಅಭಿನಯದ ವೀರ್ ಮತ್ತು ವಂಶಿ, ತಪ್ಪಿದ್ದರೂ ಮರುಗಿ ಬಿಂಕದಿಂದ ಇರುವ ಬ್ಯಾಡಗಿ ತಾತಯ್ಯ ಅವರ ಸಂಬಂಧಗಳು ರೋಚಕ ತಿರುವು ಪಡೆಯುತ್ತಿದೆ. ಪ್ರತಿ ಕಂತೂ ಅದ್ಭುತ, ಸಿನಿಮಾದಂತೆ ಗೋಚರಿಸುತ್ತದೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ವಾರದ ಪತ್ರ

## ಸ್ಫೂರ್ತಿಯ ಚಿಲುಮೆ

ಚಂದನ ವಾಹಿನಿಯಲ್ಲಿ ಮಹಿಳೆಯರಿಗೆ ಸ್ಫೂರ್ತಿದಾಯಕವಾಗುವಂತೆ 'ಶುಭೋದಯ' ಕಾರ್ಯಕ್ರಮ ರೂಪಿಸಿದ್ದಾರೆ. ವಿಶ್ವ ಮಹಿಳಾದಿನದ ಅಂಗವಾಗಿ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಇಲ್ಲಿ ಪರಿಚಯಿಸಲಾಗುತ್ತಿದೆ. ನಿತ್ಯ ಎಂಟು ಗಂಟೆಗೆ ಪ್ರಸಾರವಾಗುವ ಶುಭೋದಯ ಎಲ್ಲರಲ್ಲೂ ಭರವಸೆಯನ್ನು ಮೂಡಿಸುವಂತಿದೆ.

ಈ ಕಾರ್ಯಕ್ರಮ ನೋಡಿದ ಪ್ರತಿಯೊಬ್ಬರಿಗೂ ನಾನೂ ಸಾಧಿಸಬೇಕು ಎಂಬ ಛಲ ಬರುವಂತೆ ರೂಪಿಸಲಾಗಿದೆ. ಇದನ್ನು ಮರುಪ್ರಸಾರ ಮಾಡಿದರೆ ಮತ್ತೊಮ್ಮೆ ನೋಡಬೇಕು ಎಂದು ಅನ್ನಿಸುತ್ತದೆ. ಜ್ಞಾನವನ್ನು ವಿಸ್ತರಿಸುವಂತಿದ್ದೂ ಎಲ್ಲಾ ವಯೋಮಾನದವರೂ ನೋಡಬಹುದು.

—ಎಂ.ಎಸ್. ಉಷಾ ಪ್ರಕಾಶ್ ಮೈಸೂರು

## ಬಿಗ್‌ಬಾಸ್ ಸ್ಪರ್ಧಿಗಳು ಅಮಾಯಕರೆ

ಕಲರ್ಸ್ ಕನ್ನಡದಲ್ಲಿ 8ನೇ ಕಂತಿನ 'ಬಿಗ್‌ಬಾಸ್' ಪ್ರಸಾರವಾಗುತ್ತಿದೆ. ಸ್ಪರ್ಧಿಗಳು ಹಳೆಯ ಕಂತುಗಳನ್ನು ನೋಡದೆ ಪ್ರವೇಶ ಮಾಡುವುದಿಲ್ಲ. ಮನೆಯ ಒಳಗೆ ಹೋದವರಲ್ಲಿ ಹೆಣ್ಣು ಗಂಡೆಂಬ ಭೇದವಿರುವುದಿಲ್ಲ. ಇಲ್ಲಿ ಎಲ್ಲರೂ ಒಂದೇ. ಇನ್ನು ಟಾಸ್ಕ್ ವಿಷಯಕ್ಕೆ ಬಂದರೆ ಇಬ್ಬರು ಸೇರಿಯೇ ಟಾಸ್ಕ್ ಮಾಡಬೇಕಾಗುತ್ತದೆ. ಎಲ್ಲರಿಗೂ ತಾವು ಗೆದ್ದು ಬಹುಮಾನ ಪಡೆಯಬೇಕೆಂಬ ಬಿಗ್‌ಬಾಸ್ ಆಗಬೇಕೆಂಬ ಸ್ವಾರ್ಥ ಇದ್ದೇ ಇರುತ್ತದೆ. ಹಾಗಾಗಿ ಹೆಣ್ಣು ಗಂಡು ಎಂದು ನೋಡದೆ ಆಟ ಆಡುತ್ತಾರೆ.

ಒಂದಿಬ್ಬರು ಸ್ಪರ್ಧಿಗಳು ಎಲ್ಲೆಲ್ಲಿಯೋ ಮುಟ್ಟಿದರು. ಹೆಣ್ಣು ಎನ್ನುವುದನ್ನೂ ಮರೆತರು ಎಂಬ ಆಕ್ಷೇಪದ ಧ್ವನಿ ಎತ್ತಿದ್ದಾರೆ. ಅವರು ಮನೆಯ ಒಳಗೆ ಪ್ರವೇಶಿಸುವಾಗ ತಾವು ಹೆಣ್ಣು ಎಂಬ ಅಂಶವನ್ನೇ ಮರೆತಿರಬಹುದು. ಇಂಥ ರಿಯಾಲಿಟಿ ಶೋಗೆ ಬರುವವರು ಎಲ್ಲಾ ಸಾಧ್ಯತೆಗಳನ್ನೂ ಯೋಚಿಸಿಯೇ ಕಾಲಿಡಬೇಕು. ಇಂದಿನ ಪೀಳಿಗೆಯಲ್ಲಿ ಯಾರು ಏನೂ ಅರಿಯದ ಅಮಾಯಕರೇನಲ್ಲ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಮೂರ್ಖತನದ ಕಥೆ

ಕಲರ್ಸ್ ಕನ್ನಡದ 'ನನ್ನರಸಿ ರಾಧೆ'ಯಲ್ಲಿ ತಾಯಿ ವೈದೇಹಿಯನ್ನು ಹುಡುಕುತ್ತಿರುತ್ತಾರೆ. ಮನೆಯಲ್ಲಿ ಸಂತೋಷ್ ರಾಥೋಡ್‌ನನ್ನು ಬಿಟ್ಟರೆ ಬೇರೆ ಯಾರೂ ಅವಳನ್ನು ನೋಡಿರುವುದಿಲ್ಲ. ಒಂದೇ ಮನೆಯಲ್ಲಿ ಇದ್ದರೂ ಸಂತೋಷ್ ರಾಥೋಡ್ ಅವಳನ್ನು ನೋಡಲು ಕಾಲ ಕೂಡಿಬಂದಿರುವುದಿಲ್ಲ. ವಿಪರ್ಯಾಸವೆಂದರೆ ವೈದೇಹಿಗೆ ಹುಷಾರು ಇರುವುದಿಲ್ಲ ಅವಳನ್ನು ನೋಡಲು ಡಾಕ್ಟರ್ ಮನೆಗೆ ಬಂದಿರುತ್ತಾರೆ. ಹೆಂಡತಿಯ ಜೊತೆ ಸಂಸಾರ ಮಾಡಿದ್ದ ಸಂತೋಷ್ ರಾಥೋಡ್ ಡಾಕ್ಟರ್‌ಅನ್ನು ವೈದೇಹಿ ಎಂದು ಗುರುತಿಸದೇ ಇರುವುದು ಮೂರ್ಖತನದ ಪರಾಮಾವಧಿ ಅಲ್ಲವೇ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಬಣ್ಣ ಬದಲಿಸುವ ನ್ಯೂಸ್

ಕೆಲವು ನ್ಯೂಸ್ ಚಾನೆಲ್‌ಗಳಿಗೆ ಬದ್ಧತೆ ಮತ್ತು ದೃಢವಾದ ನಿಲುವು ಇರುವುದಿಲ್ಲ. ಸಮಯಕ್ಕೆ ತಕ್ಕಂತೆ ಬಣ್ಣ ಬದಲಾಯಿಸುತ್ತವೆ. ಇತ್ತೀಚೆಗೆ ಶಾಸಕರಿಗೆ ಸಂಬಂಧಿಸಿದ್ದು ಎನ್ನಲಾದ ಸಿಡಿಗೆ ಸಂಬಂಧಿಸಿದಂತೆ ಮೊದಲ ದಿನ ಅವರನ್ನು ಅಪರಾಧಿಯಂತೆ ಬಿಂಬಿಸಿದರು. ಕೆಲವರನ್ನು ಮನಸೋ ಇಚ್ಛೆ ಲೇವಡಿ ಮಾಡಲಾಯಿತು ಮತ್ತು ಟೀಕಿಸಲಾಯಿತು. ಎರಡು ದಿನ ಕಳೆದಂತೆ ಇನ್ನು ಯಾರನ್ನೋ ಖಳನಾಯಕರನ್ನಾಗಿ ಬಿಂಬಿಸಿದರು. ಮೊದಲ ಒಂದೆರಡು ದಿನ ಸಂತ್ರಸ್ತೆಯ ಬಗೆಗೆ ಕಣ್ಣೀರು ಹರಿಸಿದರೆ, ನಾಲ್ಕನೇ ದಿನ ಶಾಸಕರ ಪರ ವಾದಮಂಡಿಸಿದರು. ಇಂತಹ ವಿವಾದದ ಬೇರೆ ಬೇರೆ ಪ್ರಕರಣಗಳನ್ನು ಬಗೆದು ನೋಡಲಾಯಿತು. ಸುದ್ದಿವಾಹಿನಿಗಳು ಸುದ್ದಿ ಬಿತ್ತರಿಸುವ ಬದಲು ಅಭಿಪ್ರಾಯ ಸೃಷ್ಟಿಸುವ ಮಟ್ಟಕ್ಕೆ ಇಳಿದಿರುವುದು ದುರಂತ.

—ರಮಾನಂದ ಶರ್ಮಾ, ಬೆಂಗಳೂರು

## ತಾಳ್ಮೆಗೆ ಸವಾಲ್

ಕಲರ್ಸ್‌ನ 'ಗೀತಾ' ಆಸಕ್ತಿಯನ್ನು ಕಳೆದುಕೊಳ್ಳುತ್ತಿದೆ. ಗೀತಾಳ ಸ್ವಾಭಿಮಾನ ದುರಭಿಮಾನವಾಗುತ್ತಿದೆ. ಇದರಲ್ಲಿ ಶಿಕ್ಷಕರನ್ನು ಜೋಕರ್ ರೀತಿ ಬಿಂಬಿಸುತ್ತಿದ್ದಾರೆ. ಬಿ.ಪಿ. ಶ್ರೀನಿವಾಸ್ ಮಾತುಗಳು ನಮ್ಮ ಬಿ.ಪಿ.ಯನ್ನೂ ಹೆಚ್ಚಿಸುತ್ತಿವೆ. ಪಿಕ್ನಿಕ್ ಸನ್ನಿವೇಶಗಳು ಅಸಹಜತೆಯ ಗೂಡಾಗಿವೆ. ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಒಂದುಕಡೆ ಇದ್ದರೆ ಗೀತಾ ಒಬ್ಬಳೇ ದಟ್ಟವಾದ ಅರಣ್ಯದ ಮಧ್ಯದಲ್ಲಿ ಹೋಗುವುದು. ಆಕೆಯನ್ನು ಹಿಂಬಾಲಿಸಿದ ವ್ಯಕ್ತಿ ಅವಳನ್ನು ನೂಕುವುದು, ಅವಳು ಮರದ ರೆಂಬೆ ಹಿಡಿದು ಗಂಟೆಗಟ್ಟಲೆ ನೇತಾಡುವುದು ತೀರಾ ಅಸಹಜದಂತೆ ಕಾಣಿಸುತ್ತದೆ.

—ಶ್ರುತಿ ಎಸ್.